13205

Sl.No.

MB-352

Total No. of Pages : 4

# ಮೊದಲನೆಯ ಚತುರ್ಮಾಸ ಬಿ.ಕಾಂ./ಬಿ.ಬಿ.ಎ./ಬಿ.ಸಿ.ಎ./ಬಿ.ಸಿ.ಎಸ್.

## ಪರೀಕ್ಷೆ, ಮಾರ್ಚ್ 2023

## (ಸ್ಕೀಮ್ : ಸಿಬಿಸಿಎಸ್)

## ಕನ್ನಡ ಭಾಷೆ (ಪತ್ರಿಕೆ-೧)

## ವಾಣಿಜ್ಯ ಗಂಗೋತ್ರಿ-೧

**ಸಮಯ: 3 ಗಂಟೆಗಳು**

**ಗರಿಷ್ಠ ಅಂಕಗಳು : 80**

**ಸೂಚನೆ:** *'ಅ' ವಿಭಾಗ-2019-20 ಮತ್ತು 2020-21 ರ ವಿದ್ಯಾರ್ಥಿಗಳಿಗೆ 'ಆ' ವಿಭಾಗ-2018-19 ನೇ ಸಾಲಿನ ವಿದ್ಯಾರ್ಥಿಗಳಿಗೆ.*

### ವಿಭಾಗ-ಅ

### ಘಟಕ-೧ ಪದ್ಯಭಾಗ (50 ಅಂಕಗಳು)

ಪ್ರ1) ಅ) ಒಂದು ಪದ್ಯ ಭಾಗದ ಭಾವವನ್ನು ಸಂದರ್ಭಸಹಿತ ವಿವರಿಸಿ: [5]

೧) ಕೂಲಿ ಕಂಬಳಿಯವರ
ಪಾಲಿನ ಮೈದೊಗಲ
ಧೂಳಿಯ ಭಂಡಾರ ಹಣೆಯೊಳಗಿತ್ತೋ;
ಗುಡಿಯೊಳಗೆ ಗಣಣ, ಮಾ-
ಹಡಿಯೊಳಗೆ ತನನ, ಅಂ-
ಗಡಿಯೊಳಗೆ ಝಣಣಣ ನುಡಿಗೊಡುತ್ತಿತ್ತೋ;

೨) ನಾನು ದೇವಸ್ಥಾನಕ್ಕೆ ಹೋದಾಗ
ಚಪ್ಪಲಿಯನ್ನು ಹೊರಗೆ ಬಿಡುವುದಿಲ್ಲ
ನಾನೇ ಹೊರಗಿರುತ್ತೇನೆ
ಚಮ್ಮಾರನ ಕಾಲುಗಳಲ್ಲಿ ಕಂಡ ಚಪ್ಪಲಿ
ಮನುಷ್ಯ ನಾಯಿಯನ್ನು ಕಚ್ಚಿದಾಗ ಆಗುವಂತೆ
ಸುದ್ಧಿಯಾಗುತ್ತದೆ.

ಆ) ಒಂದು ವಾಕ್ಯದಲ್ಲಿ ಉತ್ತರಿಸಿ: [5×1=5]

೧) ಬಿ.ಎಂ.ಶ್ರೀ ಅವರ ಪೂರ್ಣ ಹೆಸರೇನು?

೨) 'ಸುಜನಾ' ಎಂಬ ಕಾವ್ಯನಾಮದಿಂದಲೆ ಪ್ರಖ್ಯಾತರಾದವರು ಯಾರು?

೩) 'ರೈಲ್ವೆ ನಿಲ್ದಾಣದಲ್ಲಿ' ಕವಿತೆ ಯಾರ ಭಾಂಧವ್ಯಗಳ ನಿದರ್ಶನವಾಗಿದೆ?

೪) ರಾ...ರಾ... ಗಳ ಮಧ್ಯೆ ಕವಿತೆಯಲ್ಲಿ ಕಾಣಿಸುವ ಶೋಷಿತ ಹೆಣ್ಣಿನ ಪ್ರತಿನಿಧಿ ಯಾರು?

೫) 'ಖಾಲಿ ಸೈಟುಗಳು' ಕವನದ ಕರ್ತೃ ಯಾರು?

*P.T.O.*

https://www.uomonline.com

**73205** **MB-352**

[3×4=12]

ಪ್ರ2) <u>ಮೂರು</u> ವಾಕ್ಯಗಳಿಗೆ ಸಂದರ್ಭ ಸಹಿತ ವಿವರಿಸಿ:

೧) ಇಷ್ಟುದಿನ ಸಲಹಿರುವೆ ಮೂರ್ಖನನು; ಮುಂದೆಯೂ ಕೈ ಹಿಡಿದು ನಡಸಬಹುದೆಯಾ?

೨) ನಿನಗೇನ ನಾ ಬಿಡುತ್ತಿರುವೆ, ಮಗನೆ ಚರಸ್ಥಿರಾಸ್ತಿ?

೩) ಬಿಸಿ ನೀರಿದೆಯೇ ಮೀನಾ ಮಗುವಿನ ಹಾಲಿನ ಪುಡಿಗೆ?

೪) ದಿನೇ ದಿನೇ ದಿವಕ್ಕೇರುವ ರೇಟುಗಳು;

೫) ಮನಸೋತು, ಹೆಣ್ಣು ಹೊತ್ತು ಒಯ್ಯುವಾಗ ಅಡ್ಡ ಬಂದ.

[2×2=4]

ಪ್ರ3) ಅ) <u>ಎರಡು</u> ವಿಷಯಗಳಿಗೆ ಟಿಪ್ಪಣಿ ಬರೆಯಿರಿ:

ಹೇಮಪಟ್ಟಣಶೆಟ್ಟಿ, ಮೂಡ್ನಾಕೂಡು ಚಿನ್ನಸ್ವಾಮಿ, ಸೀತೆ, ರೈಲ್ವೆ ನಿಲ್ದಾಣ.

[4]

ಆ) <u>ಒಂದು</u> ವಿಷಯ ಕುರಿತು ಸ್ವಂತ ಅಭಿಪ್ರಾಯವನ್ನು ಬರೆಯಿರಿ:

೧) ಕುಟುಂಬ ನಿರ್ವಹಣೆಯಲ್ಲಿ ಗಂಡು-ಹೆಣ್ಣಿನ ಪಾತ್ರ ಚಿತ್ರಣ.

೨) ತಾಯಿ-ಮಗಳ ನಡುವಿನ ಮಧುರ ಬಾಂಧವ್ಯ.

[10]

ಪ್ರ4) <u>ಒಂದು</u> ಪ್ರಶ್ನೆಗೆ ಉತ್ತರಿಸಿ:

೧) ಭರವಸೆಯ ಬೆಳಕು ಬದುಕಿನ ಕೆಡುಕನ್ನು ತೊಳೆಯುವ ಪರಿ 'ಪ್ರಾರ್ಥನೆ' ಕವಿತೆಯಲ್ಲಿ ಅಭಿವ್ಯಕ್ತವಾಗಿರುವ ಬಗೆ ಹೇಗೆ?

೨) ಸಾಮಾನ್ಯ ಜನರ ಮನಸ್ಸಿನ ಪೂರೈಸಲಾರದ ಆಸೆಗಳೇ ಈ 'ಖಾಲಿ ಸೈಟುಗಳು'-ಚರ್ಚಿಸಿ.

[2×5=10]

ಪ್ರ5) <u>ಎರಡು</u> ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ:

೧) ದುರ್ಬಲ ವರ್ಗದವರ ಮೇಲೆ ಬಲಾಢ್ಯರ ದಬ್ಬಾಳಿಕೆ 'ಕುರುಡು ಕಾಂಚಾಣ' ಕವಿತೆಯಲ್ಲಿ ಹೇಗೆ ಮೂಡಿದೆ? ವಿವರಿಸಿ.

೨) ಇಪ್ಪತ್ತನೆಯ ಶತಮಾನದ ಕನಸು ನುಚ್ಚುನೂರಾಗಿ ಬದುಕು ಘೋರ ದುರಂತಕ್ಕೆ ಈಡಾಗುತ್ತಿರುವ ಆತಂಕಗಳನ್ನು ವಿವೇಚಿಸಿ.

೩) ರಾಮ-ರಾವಣರ ಭಿನ್ನ ವ್ಯಕ್ತಿತ್ವಗಳ ಮುಖಾ-ಮುಖಿಯಲ್ಲಿ ಶೋಷಿತಳಾಗುವ ಸೀತೆಯ ಪಾತ್ರ ಚಿತ್ರಣವನ್ನು ವಿವರಿಸಿ.

೪) ಅಸ್ಪೃಶ್ಯತೆಯ ಕರಾಳ ಮುಖಗಳನ್ನು 'ಚಪ್ಪಲಿ ಮತ್ತು ನಾನು' ಕವಿತೆಯ ಹಿನ್ನೆಲೆಯಲ್ಲಿ ವಿಶ್ಲೇಷಿಸಿ.

## ಘಟಕ-೨ ಗದ್ಯಭಾಗ (30 ಅಂಕಗಳು)

[10]

ಪ್ರ6) <u>ಒಂದು</u> ಪ್ರಶ್ನೆಗೆ ಉತ್ತರಿಸಿ:

೧) ಬೆಸಗರಹಳ್ಳಿ ರಾಮಣ್ಣ ಅವರ 'ಸುಗ್ಗಿ' ಕಥೆಯಲ್ಲಿ ಸಾಂಸ್ಕೃತಿಕ ಮೌಲ್ಯಗಳು ಹೇಗೆ ಸಾಕಾರಗೊಂಡಿವೆ? ಚರ್ಚಿಸಿ.

೨) ವಿವಾಹ ಪೂರ್ವದ ಗಂಡು-ಹೆಣ್ಣಿನ ಸಂಬಂಧದಿಂದ ಹುಟ್ಟಿದ ಮಗುವು ಗೌರವ, ಆದರಗಳಿಂದ ವಂಚಿತವಾಗುವ ಪ್ರಸಂಗ 'ಹಮೀದು' ಪಾತ್ರದೊಂದಿಗೆ ಹೇಗೆ ಮೂಡಿ ಬಂದಿದೆ? ವಿಮರ್ಶಿಸಿ.

https://www.uomonline.com

ಪ್ರ7) ಒಂದು ಪ್ರಶ್ನೆಗೆ ಉತ್ತರಿಸಿ: [10]

೧) ಸಾವೆಂಬ ಕಟುಸತ್ಯವನ್ನು ಅರಗಿಸಿಕೊಂಡು ಸಮಚಿತ್ತತೆಯನ್ನು ಕಾಯ್ದುಕೊಳ್ಳುವ ಪ್ರಸಂಗ 'ಸಾವಿನ ಸುತ್ತ' ಲಲಿತ ಪ್ರಬಂಧದಲ್ಲಿ ಹೇಗೆ ನಿರೂಪಿತವಾಗಿದೆ? ವಿವರಿಸಿ.

೨) ಪುಸ್ತಕ ಪ್ರೀತಿಯ ಮಹತ್ವ 'ಪುಸ್ತಕ ಪ್ರೇಮದ ಫಲಶೃತಿ' ಲೇಖನದಲ್ಲಿ ಅನಾವರಣಗೊಂಡ ಬಗೆ ಹೇಗೆ?

ಪ್ರ8) ಎರಡು ವಿಷಯಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ: [2×5=10]

೧) ನಾಗೇಶ ಹೆಗಡೆ ಅವರ ಪರಿಸರ ಕಾಳಜಿ 'ಲೂಟಿಯ ಹೆದ್ದಾರಿಗಳು' ಲೇಖನದಲ್ಲಿ ಹೇಗೆ ಅಭಿವ್ಯಕ್ತ ಗೊಂಡಿದೆ?

೨) ಶಿವರಾಮಣ್ಣ ಮತ್ತು ಪುಟ್ಟಸ್ವಾಮಿ ಅವರ ಬಾಂಧವ್ಯ ಬಿರುಕು ಕುರಿತು ಬರೆಯಿರಿ.

೩) ಕೊರಗನ ಮನೋತಲ್ಲಣಗಳನ್ನು ವಿಶ್ಲೇಷಿಸಿ.

೪) ಅನಂತರಂಗಾಚಾರ್ಯರ ಪಾತ್ರ ಪರಿಚಯ.

## ವಿಭಾಗ–ಆ

### ಸವಿಸ್ತರ ಮತ್ತು ಅವಿಸ್ತರ ಪಠ್ಯ : ಹೊಸಗನ್ನಡ ಸಾಹಿತ್ಯ ಸಂಪುಟ–೨

### (2018–19 ರ ಸಿಬಿಸಿಎಸ್ ವಿದ್ಯಾರ್ಥಿಗಳಿಗಾಗಿ) ಸವಿಸ್ತರ ಪಠ್ಯ (ಕವಿತೆಗಳು) (50 ಅಂಕಗಳು)

[5]

ಪ್ರ1) ಒಂದು ಪದ್ಯದ ಭಾವವನ್ನು ಸಂದರ್ಭಸಹಿತ ವಿವರಿಸಿ:

೧) ಯೆಂಡ ಕುಡಿಯಾದ್ ಬುಟ್‌ಬುಡ್ ರತ್ನ ।
ಅಂತ ಔನ್ ಏನಾರ ಅಂದ್ರೆ
ಮೂಗ್ ಮೂರ್ ಚೂರಾಗ್ ಮುರಸ್ಕೊಂತೀನಿ
ದೇವರ್ ಮಾತ್ಗ್ ಅಡ್ಡಂದ್ರೆ

೨) ಕೆರಳಿ ಕೆರಳಿ ಗಾಳಿ ಚಚ್ಚಿತು
ಇರುಳ ಕತ್ತಲೆ ಕವಿದು ಮುಚ್ಚಿತು
ಕಣಿವೆ ಯಿಳಿವರ ಕುದುರೆ ಕತ್ತಿಯ
ಖಣಿ ಖಣಿ ಧ್ವನಿ ಕೇಳಿತು.

[5×1=5]

ಪ್ರ2) ಒಂದು ವಾಕ್ಯದಲ್ಲಿ ಉತ್ತರಿಸಿ:

೧) 'ಶ್ರೀನಿವಾಸ' ಯಾರ ಕಾವ್ಯನಾಮ?

೨) 'ತಿಪ್ಪಾರಳ್ಳಿ' ಕವನದ ಕರ್ತೃ ಯಾರು?

೩) ರಾಯರು ಯಾರ ಮನೆಗೆ ಬಂದರು?

೪) 'ಮರೆತೇನೆಂದರೆ ಮರೆಯಲಿ ಹೆಂಗಾ' ಪದ್ಯವನ್ನು ಯಾವ ಕವನ ಸಂಕಲನದಿಂದ ಆಯ್ಕೆ ಮಾಡಲಾಗಿದೆ?

೫) 'ಕೊತ್ತಿ' ಪದದ ಅರ್ಥವೇನು?



https://www.uomonline.com

**73205** **MB-352**

[4×5=20]

**ಪ್ರ3)** ನಾಲ್ಕು ವಾಕ್ಯಗಳನ್ನು ಸಂದರ್ಭ ಸಹಿತ ವಿವರಿಸಿ:

೧) ಹುಲಿಯಿಲ್ಲ, ಹಾವಿಲ್ಲ ಹೆದರುವುದೇಕೆ?

೨) ಪಕ್ಷಿ ಪಟ್ಟನು ತಿಂದು ಬಿದ್ದಿಹುದು; ಸಾಯುತಿದೆ.

೩) ತಮಾಷ್ ನೋಡಾಕ್ ಹೋರ ವೊಂಟ ಲಾಲ್‌ಬಾಗ್ ತೋಟಕ್ಕೆ.

೪) ಸರ್ರನೆ ಬರುತ್ತದೆ ಮರಳಿ, ಮರ ಮರಳಿ.

೫) ಪಂಚಭೂತದಾಗ ವಂಚನೆ ಕಂಡಿ.

೬) ವೈಭವದ ಮಿಂಚು ಸ್ವಪ್ರತಿಷ್ಠೆಯ ಗುಡುಗು.

[10]

**ಪ್ರ4)** ಒಂದು ಪ್ರಶ್ನೆಗೆ ಉತ್ತರಿಸಿ:

೧) ರತ್ನನ ಕನ್ನಡಾಭಿಮಾನ 'ಕನ್ನಡ ಪದಗೊಳು' ಅಭಿವ್ಯಕ್ತವಾದ ಬಗೆಯನ್ನು ವಿವರಿಸಿ.

೨) 'ಮಂಜಣ್ಣ ಹೇಳಿದ ಸ್ಥಳಗತೆ'ಯ ವಿಶೇಷತೆಯನ್ನು ಬರೆಯಿರಿ.

[10]

**ಪ್ರ5)** ಒಂದು ಪ್ರಶ್ನೆಗೆ ಉತ್ತರಿಸಿ:

೧) ಲೇಪಾಕ್ಷಿ ಸ್ಥಳದ ವಿಶೇಷತೆಯನ್ನು ವಿವರಿಸಿ.

೨) ಹನೀಫ್ ಸಾಹೇಬರ ವ್ಯಕ್ತಿತ್ವವನ್ನು ಪರಿಚಯಿಸಿ.

## ಸಣ್ಣ ಕಥೆಗಳು (30–ಅಂಕಗಳು)

[10]

**ಪ್ರ6)** ಒಂದು ಪ್ರಶ್ನೆಗೆ ಉತ್ತರಿಸಿ:

೧) 'ಅವನತಿ' ಕಥೆಯಲ್ಲಿ ಬರುವ ಸೂರಾಚಾರಿಯ ಪಾತ್ರವನ್ನು ಪರಿಚಯಿಸಿ.

೨) 'ಜ್ವಲಂತ' ಕಥೆಯ ಆಶಯವನ್ನು ಬರೆಯಿರಿ.

[10]

**ಪ್ರ7)** ಒಂದು ಪ್ರಶ್ನೆಗೆ ಉತ್ತರಿಸಿ:

೧) 'ಕೂರ್ಮಾವತಾರ' ಕಥೆಯ ಆನಂದರಾಯರ ವ್ಯಕ್ತಿತ್ವವನ್ನು ವಿಶ್ಲೇಷಿಸಿ.

೨) 'ಕುಂಡಜ್ಜನ ಪರ್ಸಂಗದ ಸ್ವಾರಸ್ಯವನ್ನು ವಿವೇಚಿಸಿ.

[2×5=10]

**ಪ್ರ8)** ಎರಡನ್ನು ಕುರಿತು ಸಂಕ್ಷಿಪ್ತವಾಗಿ ವಿವರಿಸಿ:

೧) ಕುರುಡಿ ಮೇಲೂರಿನ ಲಕ್ಷ್ಮಮ್ಮನ ಬದುಕಿನ ದುರಂತ.

೨) ರಾಗೀಂದ್ರಪ್ಪ ಕುಲಕರ್ಣಿ ಹಾಗೂ ಸೀನಿಂಗಿಯ ಬಾಂಧವ್ಯ.

೩) ಬೇನ್ಯಾ ಪಾತ್ರದ ವಿಶೇಷತೆ.

೪) ಗೌರಿಯ ವ್ಯಕ್ತಿತ್ವವನ್ನು ಪರಿಚಯಿಸಿ.

● ● ●

https://www.uomonline.com